ಔಷಧಿಗಳ ಕೊರತೆ ಬಗ್ಗೆ ಎಚ್ಚರವಿರಲಿ

ಜಿಲ್ಲಾ ಆರೋಗ್ಯ ಸಂಘದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಜಿಪಂ ಸಿಇಒ ರಾಹುಲ್

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಜಿಲ್ಲೆಯ ತಾಲೂಕು ಆಸ್ಪತ್ರೆಗಳು, ಸಮು ದಾಯ ಆರೋಗ್ಯ ಕೇಂದ್ರ ಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳ ಸಮರ್ಪಕ ಬಳಕೆ ಮತ್ತು ಸರಿಯಾದ ನಿರ್ವಹಣೆ ಆಗಬೇಕು. ಸಾರ್ವಜನಿಕರಿಗೆ ಯಾವುದೇ ಕಾರಣಕ್ಕೂ ಔಷಧಿಗಳ ಕೊರತೆ ಉಂಟಾಗಬಾರದು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಬುಧವಾರ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಜಿಲ್ಲಾ ಆರೋಗ್ಯ ಸಂಘದ ಪ್ರಗತಿ ಪರಿಶೀಲನಾ ಸಭೆಗೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ಅನುದಾನ ಲಭ್ಯವಿದ್ದು, ಆದರಂತೆ ಔಷಧಿಗಳ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು. ಖರೀದಿಸಿದ ಔಷಧಿಗಳನ್ನು ಸಂಬಂಧಿಸಿದ ಜಾಲತಾಣದಲ್ಲಿ ಸರಿಯಾಗಿ ದಾಖಲಿಸಿ,

ಸರಬರಾಜು ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಅವರು ನಿರ್ದೇಶನ ನೀಡಿದರು.ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾಲಸ್ವಾಸ್ಥ್ಯ ತಂಡಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಎರಡು ತಿಂಗಳಿಗೊಮ್ಮೆ ವಸತಿ ನಿಲಯಗಳಿಗೆ ಭೇಟಿ ನೀಡಿ ಕುಡಿಯುವ ನೀರಿನ ಮಾದರಿ ಪರೀಕ್ಷೆ ನಡೆಸಬೇಕು. ಜೊತೆಗೆ ಮಕ್ಕಳ ಮಾನಸಿಕ ಆರೋಗ್ಯ ಕುರಿತು ತಪಾಸಣೆ ನಡೆಸಿ ಅವರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕು. ಈ ಕುರಿತು ಮಾಡಿದ ಭೇಟಿಗಳ ವಿವರಗಳನ್ನು ದಾಖಲಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ಸೂಚನೆ ನೀಡಿದರು.

ಇನ್ನು, ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಖಾಲಿ ಇರುವ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡುವಂತೆ ಸೂಚನೆ ನೀಡಲಾಗಿದೆ. ಮೂರು ದಿನಗಳೊಳಗಾಗಿ ಪತ್ರಿಕೆಯಲ್ಲಿ ಪ್ರಕಟಣೆ ನೀಡಿ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಅಂಧತ್ವ ನಿವಾರಣಾ ಕಾರ್ಯಕ್ರಮದಡಿ ರಾಮದುರ್ಗ, ಸವದತ್ತಿ ಹಾಗೂ ಹುಕ್ಕೇರಿ ತಾಲೂಕುಗಳಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆಯ ಪ್ರಗತಿ ಕಡಿಮೆಯಾಗಿದೆ. ಖಾಸಗಿ ಸಂಸ್ಥೆಗಳಿಗೆ ಕಡಿಮೆ ಗುರಿ ನಿಗದಿಪಡಿಸಿರುವುದು ಹಾಗೂ ಸಂಬಂಧಿತ ಪ್ರದೇಶಗಳಲ್ಲಿ ಶಸ್ತ್ರಚಿಕಿತ್ಸಾ ಸೌಲಭ್ಯಗಳ ಕೊರತೆ ಇರುವುದು ಇದಕ್ಕೆ ಕಾರಣ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ವಿಶೇಷ ದಿನಗಳು ಹಾಗೂ ಜಯಂತಿಗಳ ಸಂದರ್ಭದಲ್ಲಿ ರಕ್ತದಾನ ಶಿಬಿರಗಳನ್ನು ಆಯೋಜಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳುವಳಿಕೆ ನೀಡಲಾಯಿತು.

ಇನ್ನು, ಸಭೆಗೆ ಗೈರಾಗಿದ್ದ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಹಾಜರಾಗಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಐ.ಪಿ.ಗಡಾದ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ತಾಲೂಕು ಮಟ್ಟದ ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.

ಸ್ಥಿರವಾದ ಅಧ್ಯಯನ ಅತಿ ಮುಖ್ಯ

ಮಾರ್ಗದರ್ಶನ ತರಬೇತಿ ಕಾರ್ಯಕ್ರಮದಲ್ಲಿ ಯುಪಿಎಸ್ಸಿ ಟಾಪರ್ ಕಿರಣ ಕಮತೆ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ವಿದ್ಯಾರ್ಥಿಗಳಿಗೆ ಸ್ಥಿರತೆ ಮತ್ತು ಶಿಸ್ತು ಮುಖ್ಯ. ದಿನಕ್ಕೆ ಹದಿನೆಂಟು ಹತ್ತೊಂಬತ್ತು ಗಂಟೆ ಓದುವುಕ್ಕಿಂತಲೂ ಪ್ರತಿನಿತ್ಯ ಐದು-ಆರು ಗಂಟೆ ಸ್ಥಿರವಾಗಿ ಅಭ್ಯಾಸ ನಡೆಸುವುದು ಅತಿ ಅವಶ್ಯಕ ಎಂದು ಯುಪಿಎಸ್‌ಸಿ ಯಲ್ಲಿ ದೇಶಕ್ಕೆ 53 ಮತ್ತು ರಾಜ್ಯಕ್ಕೆ ಮೊದಲ ಸ್ಥಾನ ಪಡೆದ ಕಿರಣ ಕಮತೆ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಕುವೆಂಪು ಸಭಾಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸಲು ಮಾರ್ಗದರ್ಶನ ಮತ್ತು ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಓದುವ ಗಂಟೆಗಳ ಸಂಖ್ಯೆ ಮುಖ್ಯವಲ್ಲ, ಆ ಸಮಯದಲ್ಲಿ ಕಲಿತ ವಿಷಯಗಳ ಗುಣಮಟ್ಟ ಮುಖ್ಯ. ಗಮನವಿಟ್ಟು, ಅರ್ಥಮಾಡಿಕೊಂಡು, ವಿಷಯಗಳ ಆಳಕ್ಕೆ ಇಳಿದು ಓದುವುದು ಮೇಲ್ನೋಟಕ್ಕೆ ಹೆಚ್ಚು ಸಮಯ ಓದುವುದಕ್ಕಿಂತಲೂ ಹೆಚ್ಚು ಪರಿಣಾಮಕಾರಿ ಎಂದು ಹೇಳಿದರು.

ಕುಲಪತಿ ಪ್ರೊ.ಸಿ.ಎಂ.ತ್ಯಾಗರಾಜ ಮಾತನಾಡಿ, ವಿದ್ಯಾರ್ಥಿಗಳಿಗೆ ಭಾರತೀಯ ಆಡಳಿತ ಸೇವೆಯ ಪರೀಕ್ಷೆಗೆ ಸಿದ್ಧತೆ ನಡೆಸಲು ಬೇಕಾದ ಎಲ್ಲ ಸಹಾಯವನ್ನು ವಿಶ್ವವಿದ್ಯಾಲಯದ ವತಿಯಿಂದ ಮಾಡಲಾಗುವುದು. ವಿದ್ಯಾರ್ಥಿಗಳು ಸಾಧಕರಿಂದ ಸ್ಫೂರ್ತಿ ಪಡೆದು, ಬದಲಾಗುತ್ತಿರುವ ಕಾಲಘಟ್ಟದಲ್ಲಿ ತಂತ್ರಜ್ಞಾವನ್ನು ಅರಿತು ಹೊಸ ವಿದ್ಯಮಾನಗಳನ್ನು ಕಲಿತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಿದ್ಧರಾಗಬೇಕು ಎಂದು ಎಂದರು.

ಕಾರ್ಯಕ್ರಮದಲ್ಲಿ ಕುಲಸಚಿವ ಸಂತೋಷ್ ಕಾಮಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೌಲ್ಯಮಾಪನ ಕುಲಸಚಿವ ಪ್ರೊ.ಡಿ.ಎನ್.ಪಾಟೀಲ್, ವಿದ್ಯಾರ್ಥಿ ಕಲ್ಯಾಣ ವಿಭಾಗದ ನಿರ್ದೇಶಕರಾದ ಪ್ರೊ.ವೈ.ಎಸ್.ಬಲವಂತಗೋಳ್, ಹಿಂದುಳಿದ ಕಲ್ಯಾಣ ಇಲಾಖೆಯ ಜಿಲ್ಲಾ ನಿರ್ದೇಶಕ ಪ್ರಕಾಶ್ ಹರಗಾಪುರ, ಸಿಂಡಿಕೇಟ್ ಸದಸ್ಯರಾದ ರಫೀಕ್ ಭಂಡಾರಿ, ಡಾ.ಕಿರಣ್ ಕುರ್ಮಾ.ಪಿ, ಡಾ.ರವಿ ದಳವಾಯಿ, ಡಾ.ರಮೇಶ್ ಕಾಂಬಳೆ, ಡಾ.ಪ್ರಕಾಶ್ ಕಟ್ಟಿಮನಿ ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು. ಪ್ರಲ್ಹಾದ ಬೆವನೂರು ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟರು.

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ-2: ನಿಷೇಧಾಜ್ಞೆ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಎಪ್ರಿಲ್ ಹಾಗೂ ಮೇ ತಿಂಗಳಲ್ಲಿ ನಡೆಯಲಿರುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-2 ಹಿನ್ನೆಲೆಯಲ್ಲಿ ಜಿಲ್ಲೆ ಯ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ ಏ.30ರಿಂದ ಮೇ13ರವರೆಗೆ ಜಿಲ್ಲೆಯಲ್ಲಿ ಒಟ್ಟು 14 ಕೇಂದ್ರಗಳಲ್ಲಿ ನಡೆಯಲಿವೆ. ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ 8 ಕೇಂದ್ರಗಳು ಹಾಗೂ ಬೆಳಗಾವಿ ಶೈಕ್ಷಣಿಕ ಜಿಲ್ಲೆಯ 6 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪರೀಕ್ಷೆಗಳು ಸುಗಮವಾಗಿ ಹಾಗೂ ಯಾವುದೇ ಅಕ್ರಮಗಳಿಲ್ಲದೆ ನಡೆಯುವ ಉದ್ದೇಶದಿಂದ ಕಲಂ163 ರಡಿಯಲ್ಲಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ನಿಷೇಧಾಜ್ಞೆ ಹೊರಡಿಸಿದ್ದಾರೆ.

ಈ ಆದೇಶದ ಪ್ರಕಾರ, ಪರೀಕ್ಷಾ ಕೇಂದ್ರಗಳ ಸುತ್ತ 200 ಮೀರ್ಟ ವ್ಯಾಪ್ತಿಯಲ್ಲಿ ಕೆಳಗಿನ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ. ಐದು ಅಥವಾ ಅದಕ್ಕಿಂತ ಹೆಚ್ಚು ಜನರು ಗುಂಪಾಗಿ ಸೇರುವುದು. ಪರೀಕ್ಷೆಯಲ್ಲಿ ನಕಲು ಮಾಡಲು ಸಹಾಯ ಮಾಡುವ ಉದ್ದೇಶದಿಂದ ಕೇಂದ್ರಗಳ ಸಮೀಪ ಬರುವುದು. ಸಾರ್ವಜನಿಕ ಸಭೆ ಮತ್ತು ಮೆರವಣಿಗೆ ನಡೆಸುವುದು, ಆಯುಧ, ಸ್ಫೋಟಕ ವಸ್ತುಗಳನ್ನು ತೆಗೆದುಕೊಂಡು ಸಂಚರಿಸುವುದು, ಪಟಾಕಿ ಅಥವಾ ಸಿಡಿಮದ್ದು ಸಿಡಿಸುವುದು, ಸರ್ಕಾರಿ ಬಸ್ ಹಾಗೂ ಇತರ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟುಮಾಡುವುದು, ಪರೀಕ್ಷಾ ಕೇಂದ್ರಗಳ 200 ಮೀರ್ಟ ವ್ಯಾಪ್ತಿಯಲ್ಲಿನ ಝೆರಾಕ್ಸ್ ಅಂಗಡಿಗಳನ್ನು ಮುಚ್ಚುವುದು, ವಿದ್ಯಾರ್ಥಿಗಳು, ಸಿಬ್ಬಂದಿ ಹಾಗೂ ಅಧಿಕೃತ ಅಧಿಕಾರಿಗಳನ್ನು ಹೊರತುಪಡಿಸಿ ಇತರರಿಗೆ ಶಾಲೆ, ಕಾಲೇಜು ಆವರಣ ಪ್ರವೇಶ ನಿರ್ಬಂಧಿಸಲಾಗಿದೆ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ನಗರ ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಸೂಚನೆ ನೀಡಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಭಂಡಾರದಲ್ಲಿ ಮಿಂದೆದ್ದ ಮಹಾಲಕ್ಷ್ಮೀದೇವಿ ಭಕ್ತರು

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ತಾಲೂಕಿನ ಬಿ.ಕೆ. ಕಂಗ್ರಾಳಿ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ಮಹಾಲಕ್ಷ್ಮೀ ದೇವಿಯ ರಥೋತ್ಸವ ಭಕ್ತಿಭಾವ ಮತ್ತು ಸಂಭ್ರಮದ ನಡುವೆ ವೈಭವವಾಗಿ ನೆರವೇರಿತು. ಗ್ರಾಮವೇ ಭಂಡಾರಮಯ ವಾತಾವರಣದಲ್ಲಿ ಮಿಂಚಿ, ಸಾವಿರಾರು ಭಕ್ತರು ದೇವಿಯ ದರ್ಶನಕ್ಕಾಗಿ ಹರಿದು ಬಂದಿದ್ದರು.

ಬೆಳಿಗ್ಗೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜೆ, ಅಭಿಷೇಕ ಮತ್ತು ಅಲಂಕಾರ ಕಾರ್ಯಕ್ರಮಗಳು ನೆರವೇರಿದವು. ನಂತರ ಸಡಗರದ ನಡುವೆ ಅಲಂಕೃತ ರಥದಲ್ಲಿ ತಾಯಿ ಶ್ರೀ ಮಹಾಲಕ್ಷ್ಮೀ ದೇವಿಯನ್ನು ಕೂರಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಭಕ್ತರು ಜೈ ಮಹಾಲಕ್ಷ್ಮೀ ಘೋಷಣೆಗಳ ನಡುವೆ ರಥವನ್ನು ಎಳೆಯುತ್ತ ಭಕ್ತಿ ವ್ಯಕ್ತಪಡಿಸಿದರು. ರಥೋತ್ಸವದ ಸಂದರ್ಭದಲ್ಲಿ ಗ್ರಾಮದೆಲ್ಲೆಡೆ ಭಂಡಾರ, ಪ್ರಸಾದ ವಿತರಣೆ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಮಹಿಳೆಯರು ಪೂಜೆ ಸಲ್ಲಿಸಿ ಕುಟುಂಬದ ಕಲ್ಯಾಣಕ್ಕಾಗಿ ಪ್ರಾರ್ಥಿಸಿದರು.

ಶಿವಬೋಧರಂಗ ಸೊಸೈಟಿಗೆ ₹7.30 ಕೋಟಿ ಲಾಭ

• **ಕನ್ನಡಪ್ರಭ ವಾರ್ತೆ** ಮೂಡಲಗಿ

ಮೂಡಲಗಿಯ ಶಿವಬೋಧರಂಗ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿಯು ಪ್ರಸಕ್ತ ವರ್ಷ ₹ 7.30 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಸೊಸೈಟಿಯ ಅಧ್ಯಕ್ಷ ಪುಲಕೇಶ ಸೊನವಾಲಕರ ಹೇಳಿದರು.

ಪಟ್ಟಣದ ಸೊಸೈಟಿಯ ಕಚೇರಿಯಲ್ಲಿ ನಡೆದ 2025-26ರ ಪ್ರಗತಿ ಕುರಿತು ಕರೆದಿದ್ದ ಸಭೆಯಲ್ಲಿ ಮಾತನಾಡಿದ ಅವರು, ಸೊಸೈಟಿಯು ಸದ್ಯ 6.89 ಕೋಟಿ ಶೇರು ಬಂಡವಾಳ, ₹ 476 ಕೋಟಿ ಠೇವುಗಳನ್ನು ಸಂಗ್ರಹಿಸಿದ್ದು, ₹267 ಕೋಟಿ ವಿವಿಧ ಕ್ಷೇತ್ರದ ಜನರಿಗೆ ಸಾಲ ನೀಡಿದೆ. ₹ 35 ಕೋಟಿ ನಿಧಿಗಳನ್ನು ಹೊಂದಿ ₹ 159 ಕೋಟಿ ಗ್ರಾಹಕರ ಭದ್ರತೆಗಾಗಿ ವಿವಿಧ ಬ್ಯಾಂಕ್‌ಗಳಲ್ಲಿ ಗುಂತಾವಣೆಗಳನ್ನು ಮಾಡಿದ್ದು, ₹543 ಕೋಟಿ ದುಡಿಯುವ ಬಂಡವಾಳ ಹೊಂದಿದೆ. ₹1,906 ಕೋಟಿ ವಾರ್ಷಿಕ ವಹಿವಾಟ ನಡೆಸುತ್ತಿದೆ ಎಂದರು.

ಸೊಸೈಟಿಯು ಈ ವರೆಗೆ 18 ಶಾಖೆಗಳನ್ನು ಹೊಂದಿದ್ದು ಎಲ್ಲವೂ ಪ್ರಗತಿಯಲ್ಲಿವೆ. ಸದ್ಯ 17,568 ಸಂಘದ ಸದಸ್ಯರಿದ್ದಾರೆ. ಪ್ರಸಕ್ತ ಸಾಲಿಗೆ ಶೇ.16 ರಷ್ಟು ಲಾಭಾಂಶ ಪ್ರಕಟಿಸಿದೆ. ಗ್ರಾಹಕರ ವಿಶ್ವಾಸವನ್ನು ಗಳಿಸಿದೆ. ಶೀಘ್ರದಲ್ಲಿ ನರಗುಂದ, ಬಬಲೇಶ್ವರ, ಬೀಳಗಿ, ಕುಳಗೇರಿ ಕ್ರಾಸ್, ಕೆರೂರ, ಸವದತ್ತಿ ಕೋಲಾರದಲ್ಲಿ ನೂತನ ಶಾಖೆಗಳು ಪ್ರಾರಂಭವಾಗಲಿವೆ ಎಂದರು.

ಸಭೆಯಲ್ಲಿ ಸೊಸೈಟಿ ಉಪಾಧ್ಯಕ್ಷ ಸುಭಾಸ ಸೋನವಾಲಕರ, ನಿರ್ದೇಕರಾದ ರವೀಂದ್ರ ಸೋನವಾಲಕರ, ಡಾ.ಶಂಕರ ದಂಡಪ್ಪನವರ, ಅಶೋಕ ಹೊಸೂರ, ರೇವಪ್ಪ ಕುರಬಗಟ್ಟಿ, ಶಿವಬಸು ಬೂದಿಹಾಳ, ಶಾರದಾ ಗುಲಗಾಜಂಬಗಿ, ವಿದ್ಯಾವತಿ ಸೋನವಾಲಕರ, ಮಂಜುಳಾ ಬಳಿಗಾರ, ಗಂಗವ್ವಾ ಸಣ್ಣಪ್ಪನವರ, ಹಣಮಂತ ಸಣ್ಣಕ್ಕಿ, ಲೆಕ್ಕಪರಿಶೋಧಕ ಭೀಮಸಿ ಜರಾಳೇ ಹಾಗೂ ಪ್ರಧಾನ ವ್ಯವಸ್ಥಾಪಕ ವೆಂಕಟೇಶ ಬಾಲರೆಡ್ಡಿ, ಪ್ರಧಾನ ಕಚೇರಿ ಮ್ಯಾನೇಜರ್ ಮಹೇಶ ಮಾಲಗಾರ, ಮಾರಾಟಾಧಿಕಾರಿ ಹಣಮಂತ ಕುಂಬಾರ ಉಪಸ್ಥಿತರಿದ್ದರು.

ಸತ್ವಶೀಲಾ ಪ್ರೌಢಶಾಲೆ ಶೇ.95.96 ಸಾಧನೆ

• **ಕನ್ನಡಪ್ರಭ ವಾರ್ತೆ** ಅಥಣಿ

ಪಟ್ಟಣದ ಜಾದವಜಿ ಶಿಕ್ಷಣ ಸಂಸ್ಥೆಯ ಸತ್ವಶೀಲಾ ಬಾಲಕಿಯರ ಪೌಢಶಾಲೆಯ ಎಸ್‌ಎಸ್‌ಎಲ್ಸಿ ಫಲಿತಾಂಶ ಶೇ.95.96 ರಷ್ಟಾಗಿದ್ದು, ಪೂಜಾ ಜಾದವ ಶೇ.97.28 ಅಂಕಗಳನ್ನ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಸೌಧರ್ಮಿ ಚಿಮ್ಮಡ ಶೇ.94.88 ಅಂಕ ಪಡೆದು ದ್ವಿತೀಯ, ವಿಶಾಖಾ ಸಣ್ಣಕ್ಕಿ ಶೇ.94.56 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾಳೆ. 4 ವಿದ್ಯಾರ್ಥಿನಿಯರು ಅತ್ಯುತ್ತಮ ಶ್ರೇಣಿಯಲ್ಲಿ, 13 ಜನ ಉತ್ತಮ ಶ್ರೇಣಿಯಲ್ಲಿ, 58 ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಈ ಸಾಧನೆಗೆ ಕನ್ನಡಪ್ರಭ ಯುವ ಆವೃತ್ತಿಯಲ್ಲಿ ಪ್ರಕಟವಾಗುತ್ತಿದ್ದ ಎಸ್ ಎಸ್ ಎಲ್ ಸಿ ಪಠ್ಯಕ್ರಮದ ಮಾರ್ಗಸೂಚಿ ಮತ್ತು ಶಾಲೆಯ ಶಿಕ್ಷಕರ ಮಾರ್ಗದರ್ಶನ ಬಹಳಷ್ಟು ಸಹಕಾರಿಯಾಗಿದೆ ಎಂದು ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದರು. ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಶಾಲೆಯ ಮುಖ್ಯೋಪಾಧ್ಯಾಯರು, ಸಿಬ್ಬಂದಿ ಅಭಿನಂದಿಸಿದ್ದಾರೆ.

CITATION

P & SC 16/2026

IN THE COURT OF THE HON'BLE 2nd ADDITIONAL SENIOR JUDGE BELAGAVI. AT: BELAGAVI

Between
1) Smt. Indumati Wd/o. Laxmansa Kosandal & Others. ...Petitioners
And:
Nil ...Respondents

Petition for Grant of Succession Certificate of Late. Laxmansa S/o. Tuljansa Kosandal who was died on 30/11/2005 at CCB No. 05, Gogte College Road, Hindwadi, Belagavi, State Karnataka to have effect Throughout India Under Section 372 of The Indian Succession Act of 1925.

Whereas the petitioners above named have filed the top noted petition for grant of succession certificate of Late. Deceased Late. Laxmansa S/o. Tuljansa Kosandal who was died on 30/11/2005 at CCB No. 05, Gogte College Road, Hindwadi, Belagavi, State Karnataka to have effect throughout India under section 372 of the Indian succession act of 1925. With respect to Equity Shares as mentioned in the petition.

This is to give notice to the public at large that, if any one claiming to be the legal heirs of the deceased Late. Laxmansa S/o. Tuljansa Kosandal May appear in this court in person or through legal practitioner on 22/06/2026 at 11:00 a.m. Along with all relevant documents in support of their claim.

Take Notice that, in default of appearance on the date and time mentioned above, the petition will heard and determine in your absence.

Given under my hand and the seal of this court this the 28th day of April 2026.

By order of the Court
Sd/- Sr. Shirastedar and CJM
Senior Civil Judge Belagavi
Sd/- Bench Clerk
2nd Addl. SR. CJ & CJM
Sd/- Y. G. Gumaj
Advocate for Petitioner
Seal

ಜಿ. & ಡಬ್ಲ್ಯೂ.ಸಿ. ನಂ. 160/2025

ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ರಾಮದುರ್ಗ ಇವರ ನ್ಯಾಯಾಲಯದಲ್ಲಿ ರಾಮದುರ್ಗ

1) ಶ್ರೀ ಮಹಾದೇವ ಗುರುಪಾದಪ್ಪ ಬಡಿಗೇರ ಹಾಗೂ ಇನ್ನೊಬ್ಬರು ಬಂಕಾರ ಪೇಟೆ, ರಾಮದುರ್ಗ ...ಅರ್ಜಿದಾರರು
ವಿರುದ್ಧ
1) ಯಾರೂ ಇಲ್ಲ ...ಎದುರುಗಾರರು

ಜಾಹೀರ ನೋಟಿಸ್

ಮೇಲ್ಕಾಣಿಸಿದ ಪ್ರಕರಣವನ್ನು ಅರ್ಜಿದಾರರ ಮಗಳಾದ ತಾರಾ ಹೇಮಾದ್ರಿ ಬಡಿಗೇರ ಹಾಗೂ ಆಕೆಯ ಗಂಡನಾದ ಹೇಮಾದ್ರಿ ಬಡಿಗೇರ ಇವರು ಮೃತರಾಗಿದ್ದರಿಂದ ಇವರ ಮಗನಾದ ಶ್ರೇಯಸ್ ಹೇಮಾದ್ರಿ ಬಡಿಗೇರ ಇತನ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಪ್ರಾರ್ಥಿಸಿ ಸದರ ಈ ಪ್ರಕರಣವನ್ನು ದಾಖಲಿಸಿದ್ದು ಇರುತ್ತದೆ.

ಆದ್ದರಿಂದ ಸದರಿ ಪ್ರಕರಣದಲ್ಲಿ ಯಾರದಾದರೂ ಯಾವುದೇ ರೀತಿ ಹಿತಾಸಕ್ತಿ ಉಳ್ಳವರು ಇದ್ದಲ್ಲಿ ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ರಾಮದುರ್ಗ ಇವರಲ್ಲಿ ದಿನಾಂಕ: 09/06/2026 ರಂದು ಮುಂಜಾನೆ 10:30 ಘಂಟೆಗೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು ಅಂತಾ ಜಾಹೀರ ನೋಟಿಸು.

ಈ ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ಈ ನೋಟಿಸ್‌ನ್ನು ಹೊರಡಿಸಲಾಗಿದೆ.
ಸ್ಥಳ: ರಾಮದುರ್ಗ, ದಿನಾಂಕ: 07/04/2026

ಸಹಿ/- ಹಿರಿಯ ಶಿರಸ್ತೇದಾರರು
ಹಿರಿಯ ದಿವಾಣಿ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ. ನ್ಯಾಯಾಲಯ ರಾಮದುರ್ಗ
ಸಹಿ/- (ಜೆ. ಆಯ್. ಬೆಣ್ಣಿ)
ಅರ್ಜಿದಾರರ ಪರ ವಕೀಲರು, ರಾಮದುರ್ಗ
Seal

PUBLIC NOTICE

My Client **Mr. Subhash S/o. Laxman Bhandare Resident of Datta Galli, Vadagaon, Belagavi**, has Lost Original Registered sale deed which is registered at Sub-Registrar office Belagavi bearing registration No.3621 dtd. 05-01-1989, For All that piece and parcel of plot No.113-P1 (old plot No.113) from out of R.S.No.6/3A/1A & R.S.No.6/2B measuring 40' X 50' = 2000 sq.fts., corresponding CTS No.3396/2, situated at Hanuman Nagar, Belagavi, Tal. & Dist. Belagavi, within the jurisdiction of Sub Registrar Office Belagavi. The above said deed is lost on 28-04-2026, about 11:30 AM, from Datta Galli, Vadagaon, till Shahapur, Belagavi., If the above said document is found to anybody are requested to hand over to the undersigned.

Place: Belagavi
Date : 29-04-2026
Sd/-
S.D.Killekar,(Advocate)
Off : C.C.B.No.1015, Vandan Colony, Shahunagar, Belgaum -10
Mobile: 9740311300

CITATION

Comm. O.S.No. 93/2025

IN THE COURT OF HON'BLE PRL DIST & SESSIONS JUDGE [COMMERCIAL COURT] BELAGAVI, AT: BELAGAVI

Between:
1) Karnataka Grameena Bank ... Plaintiff
And
1) Smt Kalpana Kesti and another ...Defendants
To,
1) Smt Kalpana W/o Mallesh Kesti
Age : Major, Occu : Business,
R/o.: H.No.14, Kondappa Street Camp, Belagavi-590001.
...Defendant No. 1

SUMMONS U/O V RULE 20, (1A) OF C.P.C.

Whereas, the above named plaintiff has instituted the said suit against you the defendant No.1, you are hereby summoned to appear in this court in person or through authorized agent on the day of **18/06/2026 at 11:00 AM** to answer the claim. Take notice that, in default of your appearance on the day mentioned, the case will be heard and determined in your absence.

Given under my hand and seal of this Court on 23rd day of April-2026.

By the order of the Court
Sd/- Bench Shirastedar
Sd/- C.A.O. Prl. Dist. & Sessions Judge Court, Belagavi.
Sd/- S. S. Patil
Advocate for Plaintiff

EP.816/2024

IN THE COURT OF THE HONTBLE II ADDL CIVIL JUDGE BELAGAVI AT. BELAGAVI

BETWEEN
1) Shri Joseph C.F.Bequeirs ....Decree Holder
AND
1) Smt. Kamla S. Bangera and others. ......Judgment Debtors
To,
JD No.1 Smt.Kamla S. Bangera Age: 87 yrs, Occ: House wife. R/o: B.C.No.38B, North Telegraph Road, Camp, Belagavi

SUIT SUMMONS UNDER ORDER V RULE 20 CPC.

WHEREAS, the above named Decree Holder has filed E.P.No.816/2024 against you and others for possession in respect of the suit property. You are hereby summoned to appear in this Court in person or through a pleader duly instructed and able to answer all material questions relating to the decree holder's claim on 12/06/2026 at 10-30 a.m. before the Hon'ble II Addi. Civil Judge. Belagavi At Belagavi. Take notice that in default of your appearance, the petition will be heard and determined in your absence.

Given under my hand and the seal of this Court, this the 04 day of 04/2026

By order of the Court
Sd/- Sheristedar
Hon'ble II Addl.Civil Judge, Belagavi
Sd/- Bench Clerk
Sd/- Shri.A.G.Kulkarni
Adv-for-Decree holder
Court Seal

CHANGE OF NAME

I, **Soujanya Patil D/o. Mr. Shivlingappa Patil** C/21, Vidyanagar, Bailhongal Have changed my name to **Mrs. Soujanya Ekanath Gurav** for all future purpose. Vide Affidavit sworn to before Advocate & Notary R. G. Hulikatti at Belagavi Dated: 29/04/2026

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

IDFC FIRST Bank

CIN : L65110TN2014PLC097792
ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031.
ದೂ: +91 44 4564 4000/ ಫ್ಯಾಕ್ಸ್: +91 44 4564 4022

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

ಕ್ರ. ಸಂ.	ಸಾಲ ಖಾತೆ ಸಂ.	ಸಾಲದ ವಿಧ	ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ	ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ
1	137832575	ಆಸ್ತಿ ಮೇಲಿನ ಸಾಲ	1. ರಮೇಶ್ ತಿಪ್ಪಣ್ಣ ಮುರ್ಕಿಭಾನ್ವಿ 2. ಶಾಂತಾ ಮುರ್ಕಿಭಾನ್ವಿ	30.03.2026	ಐಎನ್‌ಆರ್ 8,48,835.23/-
ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ವಿಪಿಸಿ ಹಳೇ ಸಂ. 29, ವಿಪಿಸಿ ಹಳೇ ಸಂ. 29, ಇ-ಸ್ವತ್ತಿನ ಸಂ. 150400503900320147, ವಿಸ್ತೀರ್ಣ- 69.68 ಚದರ ಮೀಟರ್, ಚಿಗದೊಳ್ಳಿ ಗ್ರಾಮ, ಮೇಲವಾಂಕಿ ಗ್ರಾಮ ಪಂಚಾಯತ್ ವ್ಯಾಪ್ತಿ, ಗೋಕಾಕ್, ಬೆಳಗಾವಿ ಬೆಳಗಾಂ, ಕರ್ನಾಟಕ. ಮತ್ತು ಚಕ್ಕುಬಂದಿ: ಉತ್ತರಕ್ಕೆ: ಅಕರೆಮ್ಮ ದೇವಿ ದೇವಸ್ಥಾನ, ದಕ್ಷಿಣಕ್ಕೆ: ರಸ್ತೆ, ಪಶ್ಚಿಮಕ್ಕೆ: ಶಾಂತಾ ರಮೇಶ್ ಮುರ್ಕಿಭಾವಿ, ಪೂರ್ವಕ್ಕೆ: ಪಾರ್ವತಿ ಯಮನಪ್ಪ ಹರಿಜನ್.					
2	145635425	ಆಸ್ತಿ ಮೇಲಿನ ಸಾಲ	1. ಶಾಂತವ್ವ ಬುಮನ್ನವರ್ 2. ಸಾವಿತ್ರಿ ಬುಮನ್ನವರ್ 3. ಯಲ್ಲಪ್ಪ ಬುಮನ್ನವರ್	10.04.2026	ಐಎನ್‌ಆರ್ 8,38,342.55/-
ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ವಿಪಿಸಿ ಹಳೇ ಸಂ. 1249, ಇ-ಸ್ವತ್ತಿನ ಸಂ. 150400503900221342, ವಿಸ್ತೀರ್ಣ- 56 ಚದರ ಮೀಟರ್, ಮೇಲವಂಕಿ, ತಾಲ್ಲೂಕು: ಗೋಕಾಕ್, ಬೆಳಗಾವಿ, ಬೆಳಗಾಂ, ಕರ್ನಾಟಕ. ಮತ್ತು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸಿದ್ದವ್ವ ಡಿ ಭೂಮನ್ನವರ್, ಉತ್ತರಕ್ಕೆ: ರಾಯಪ್ಪ ಗೌಡಪ್ಪನವರ್ ರವರ ಮನೆ, ದಕ್ಷಿಣಕ್ಕೆ: ಮುತ್ತೆಪ್ಪ ಜಾದನವರ್ ರವರ ಭೂಮಿ.					
3	147195895	ಆಸ್ತಿ ಮೇಲಿನ ಸಾಲ	1. ಸಿದ್ದು ಮಲಕಾರಿ ಬೀಳಗಿ, 2. ಕಾವೇರಿ ಸಿದ್ದು ಬೀಳಗಿ	02.04.2026	ಐಎನ್‌ಆರ್ 8,49,766.11/-
ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ವಿಪಿಸಿ ಸಂ. 2703, ಇ-ಸ್ವತ್ತಿನ ಸಂ. 150400401600104137, ಅಳತೆ: 112.22 ಚದರಮೀಟರ್ (ಪೂರ್ವದಿಂದ ಪಶ್ಚಿಮಕ್ಕೆ: 12.405 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.052 ಮೀಟರ್, ನಿರ್ಮಿತ ಪ್ರದೇಶ 112.22 ಚದರ ಮೀಟರ್, ಗ್ರಾಮ: ಕೆರೂರು, ಗ್ರಾಮಪಂಚಾಯಿತಿ: ಕೆರೂರು, ತಾಲ್ಲೂಕು: ಚಿಕೋಡಿ, ಜಿಲ್ಲೆ: ಬೆಳಗಾವಿ, ಕರ್ನಾಟಕ- 591213 ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸ್ವಂತ ಭೂಮ, ಪಶ್ಚಿಮಕ್ಕೆ: ಸ್ವಂತ ಭೂಮಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಮಾರುತಿ ವಿರಾಪಾಕ್ಷಿ ಕುಂಬಾರ್ ರವರ ಭೂಮಿ.					

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ ,ಕಾಸ್ಟ್, ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13)ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

ದಿನಾಂಕ: 30.04.2026
ಸ್ಥಳ: ಬೆಳಗಾಂ, ಕರ್ನಾಟಕ

MANAPPURAM FINANCE LTD.

CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/05/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ಬಾಗಲಕೋಟೆ, ಬಾಗಲ್‌ಕೋಟೆ ಬಸ್ ಸ್ಟ್ಯಾಂಡ್ ರಸ್ತೆ, 0117330730032634, ಬಸವರಾಜ್ ಹಲವರ , 68025/-, ನೆಕ್ ಲೇಸ್ 1, ಬಿಜಾಪುರ, ಬಸವನ ಬಾಗೇವಾಡಿ, 0125910700034773, ಗುರುಬಸಪ್ಪ ನಾಯಿನೇಗಲಿ, 12200/-, ಸ್ಟಡ್ 1, ಬೆಳಗಾಂ, ಖಾನಾಪುರ, 0117930700055134, ಯಲ್ಲಪ್ಪ ಜಮಕೋಳಿ , 56000/-, ಫಿಂಗರ್ ರಿಂಗ್ಸ್ 1,ಮಟ್ಟಿ 1, ಬಾಗಲಕೋಟೆ, ಮಂಗಲವಾರಪೇಟ್, 0129570730017574, ವಿಶಾಲ ಕಂಬಳೇಕರ್, 11314/-, ಲಾಕೆಟ್ 1, 0057, ಬಸಪ್ಪಾ ಶಿರೋಲ್, 14042/-, ಫಿಂಗರ್ ರಿಂಗ್ಸ್ 1, ಬಿಜಾಪುರ, ತಾಳಿಕೋಟೆ, 0125200730011534, ರಾಹುಲ್ ರಾಜೇಂದ್ರಕುಮಾರ್ ಶರ್ಮಾ, 8780/-, ಫಿಂಗರ್ ರಿಂಗ್ಸ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್‌ಟಿ/ಆರ್‌ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಪಬ್ಲಿಕ್ ನೋಟಿಸ್

ನನ್ನ ಕಕ್ಷಿದಾರರಾದ ಶ್ರೀ. ಜಮೀರ್ ರಫೀಕ್ ಬಾಗವಾನ್ ಅವರ ಪರವಾಗಿ ನಾನು ಈ ಸಾರ್ವಜನಿಕ ಪ್ರಕಟಣೆಯನ್ನು ಈ ಕೆಳಗಿನ ಕಾರಣಗಳಿಗಾಗಿ ಹೊರಡಿಸಿದ್ದೇನೆ.

ನನ್ನ ಕಕ್ಷಿದಾರರು ಶೆಡ್ಯೂಲ್ ಆಸ್ತಿಯನ್ನು ಅದರ ಮಾಲೀಕರಾದ ಶ್ರೀಮತಿ. ಡೊಂಟಿ ರೆಡ್ಡಿ ಸುಶೀಲಾ W/o. ಡೊಂಟಿ ರೆಡ್ಡಿ ಪೆಂಚಲ ರೆಡ್ಡಿ, ಅವರಿಂದ ಖರೀದಿಸಲು ಬಯಸುತ್ತಾರೆ. ಆಸ್ತಿಯ ಮಾಲೀಕರು ಹೇಳುವಂತೆ, ದಿ ಟೆಲಿಫೋನ್ ಎಂಪ್ಲಾಯೀಸ್ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್, ಬೆಳಗಾವಿ ಅವರು ಶ್ರೀಮತಿ ಗೀತಾ ನಾರಾಯಣ್ ಹೆರೇಕರ್ ಅವರ ಪರವಾಗಿ ಬರೆದಿರುವ ಮೂಲ ಮಾರಾಟ ಪತ್ರ ಸಂಖ್ಯೆ **3199/1998-99** ದಿನಾಂಕ **09-11-1998** ಇದ್ದು ಅದು ಕಳೆದು ಹೋಗಿದ್ದು ಈಗ ಅದು ತಮ್ಮಲ್ಲಿ ಇಲ್ಲವೆಂದು, ಅದು ಎಲ್ಲಿಯೋ ಕಳೆದು ಹೋಗಿದೆ, ತಾವು ಅದನ್ನು ಎಷ್ಟು ಪ್ರಯತ್ನಪೂರ್ವಕವಾಗಿ ಹುಡುಕಾಡಿದರೂ ದೊರಕುತ್ತಾ ಇಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯ ಮಾಲೀಕರು ದಿನಾಂಕ **09-04-2026** ರಂದು ಪೊಲೀಸ್ ಠಾಣೆಗೆ ಎಫ್.ಆಯ್.ಆರ್/ದೂರು ಸಂಖ್ಯೆ: **2148350/2026** ಸಲ್ಲಿಸಿರುತ್ತಾರೆ. ಮತ್ತು ಸದರಿ ನನ್ನ ಕಕ್ಷಿದಾರರು State Bank of India RASMECC Branch Code-05214, ತಿಲಕವಾಡಿ ಬೆಳಗಾವಿ ಇವರಿಗೆ ಅಡಮಾನ ಮಾಡಿ ಸಾಲ ಪಡೆಯಲು ಇಚ್ಛಿಸಿದ್ದಾರೆ. ಆದ್ದರಿಂದ ನಮ್ಮ ಪಕ್ಷಕಾರರಿಗೆ ಸದರೀ ಆಸ್ತಿಯ ಕುರಿತು ಯಾವುದಾದರೂ ವ್ಯಕ್ತಿಯ, ಬ್ಯಾಂಕಿನ, ಆರ್ಥಿಕ ಸಂಸ್ಥೆಗಳ ಅಥವಾ ಸರಕಾರದ ಬೋಜಾ ಚಾರ್ಜ್, ಅಧಿಕಾರ, ತಕರಾರು ಇದೇಯೋ ಅಥವಾ ವ್ಯಾಜ್ಯ ಇದೇಯೋ ಹೇಗೆ ಎಂಬುದು ತಿಳಿಯಬೇಕಾಗಿದೆ.

ಆದ್ದರಿಂದ ಹೀಗೆ ಅನುಬಂಧದ ಆಸ್ತಿಯ ಕುರಿತು ಯಾವುದೇ ತರಹದ ಯಾರದಾದರೂ ತಕರಾರು/ಕ್ಲೇಮ್/ಬೋಜಾ ಇದಿದ್ದೇ ಆದರೇ ಅವರು ಕೆಳಗೆ ಸಹಿ ಮಾಡಿದವರಿಗೆ ಸದರೀ ನೋಟಿಸು ಪ್ರಕಟವಾದ ಏಳು (7) ದಿನದೊಳಗಾಗಿ ಸದರೀಯವರಿಗೆ ಲೇಖಿ ರಜಿಸ್ಟರ್ಡ್ ಪೋಸ್ಟ್ ಮುಖಾಂತರ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿ ಆಸ್ತಿಯ ಮೇಲೆ ಯಾವುದೇ ಬೋಜಾ ಕ್ಲೇಮ್ ಗಳಿಲ್ಲವೆಂದು ಗ್ರಹಿಸಲಾಗುವುದು. ಅದರ ನಂತರ ಬಂದ ಯಾವುದೇ ತಕರಾರು/ಕ್ಲೇಮ್ ನಮ್ಮ ಪಕ್ಷಕಾರರ ಮೇಲೆ ಬಂಧನಕಾರಕವಿರುವುದಿಲ್ಲ.

ಆಸ್ತಿಯ ಅನುಬಂಧ

ಜಿಲ್ಲೆ ವ ತಾಲೂಕ ಬೆಳಗಾವಿ, ಅಂಬೇಡ್ಕರ್ ನಗರ, ಸದಾಶಿವ ನಗರ, ಬೆಳಗಾವಿ ವ್ಯಾಪ್ತಿಯಲ್ಲಿ ಬರುವ ಪ್ಲಾಟ್ ಸಂಖ್ಯೆ **33, CTS No. 1794/2**, ಇದರ ಒಟ್ಟು ಅಳತೆ **222.96 Sq.Meters, PID No. 70452**, ಇದು ಬೆಳಗಾವಿ ಉಪ ನೋಂದಣಿದಾರರ ವ್ಯಾಪ್ತಿಯಲ್ಲಿ ಬರುತ್ತದೆ. ಇದರ ಚಕಬಂದಿ ಪೂರ್ವ: ಪ್ಲಾಟ್ ಸಂಖ್ಯೆ 34, ಪಶ್ಚಿಮ: ಪ್ಲಾಟ್ ಸಂಖ್ಯೆ 32, ಉತ್ತರ: ಪ್ಲಾಟ್ ಸಂಖ್ಯೆ 26 & 42 & ದಕ್ಷಿಣ: ರಸ್ತೆ.

ಬೆಳಗಾವಿ ಸಹಿ/- ಸಂತೋಷ ಎಸ್. ಪಾಟೀಲ
ದಿನಾಂಕ : 29-04-2026. ವಕೀಲರು,
ಪ್ಲಾಟ್ ನಂ. 81, ಸಿಟಿಎಸ್ ನಂ. 5284, ವೈಭವನಗರ, ಬೆಳಗಾವಿ-10. ಮೊ.: 9986436705

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ/ಫ್ಯಾಕ್ಸ್ : 080-2793 4470 / 2793 5412 ಇ-ಮೇಲ್: hosakote.pa@gmail.com URL : www.hosakote.tpa.gov.in

ಸಂಖ್ಯೆ: ಹೊಯೋಪ್ರಾ/ಭೂ.ಉ.ನಿ/02/2026-27 ದಿನಾಂಕ: 28.04.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಬಗ್ಗೆ.

***

ಅರ್ಜಿದಾರರಾದ ಲೇಟ್ ಹೆಚ್.ಎಂ. ಮುನಿಯಪ್ಪ ಇವರ ಮಕ್ಕಳಾದ ಶ್ರೀ ಮುನಿಕೆಂಪಣ್ಣ ಮತ್ತು ಶ್ರೀ ಎಂ. ಹುಲ್ಲೂರಪ್ಪ ಇವರ ಪರವಾಗಿ ಜಿಪಿಎದಾರರಾದ ಮೆ॥ ವಿ.ಆರ್. ಅರ್ಬನ್ ಡೆವಲಪರ್ಸ್ ಇದರ ಪರವಾಗಿ ಮ್ಯಾನೇಜಿಂಗ್ ಪಾರ್ಟ್‌ನರ್ ಆದ ಶ್ರೀ ಕಿಶೋರ್ ಆರ್. ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕಣ್ಣೂರಹಳ್ಳಿ ಗ್ರಾಮದ ಸ.ನಂ. 163/1 ರ ಪೈಕಿ 16 1/2 ಗುಂಟೆ ವಿಸ್ತೀರ್ಣದ ಜಮೀನನ್ನು **"ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ಉದ್ದೇಶದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ** ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು/ ಬರುತ್ತಿದ್ದು, "ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾ.ಸಾ.ಸಂ.ಇ/ವಾಪ್ರ/425/ಆಕಾರ್/2026-27